ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 5, November-December 2023, Pp. 125-129
Bi-Monthly, Peer-Reviewed, Open Access, Indexed Journal

I S S N: 2583-3510
S I R D F
J O U R N A L S
editor@srujani.in
www.srujani.in

# ಬಾಗಲಕೋಟೆ ಜಿಲ್ಲೆಯಲ್ಲಿ ಸೂರ್ಯಕಾಂತಿ ಎಣ್ಣೆ ಬೀಜ ಉತ್ಪಾದನೆಯ ಮೇಲೆ ಸಕ್ಕರೆ ಕಾರ್ಖಾನೆಗಳ ಪರಿಣಾಮ

**ವಿದ್ಯಾಧರ ವೀ. ಶೀಲವಂತ[1] ಮತ್ತು ಡಾ.ತಿಪ್ಪಣ್ಣ ನಿಂ.ಗೋಡಿ.[2]**
[1]ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.
[2]ಮುಖ್ಯಸ್ಥರು, ವಾಣಿಜ್ಯಶಾಸ್ತ್ರ ವಿಭಾಗ, ಕೆ.ಎಸ್.ಎಸ್. ಕಲಾ, ವಾಣಿಜ್ಯ, ವಿಜ್ಞಾನ ಮಹಾವಿದ್ಯಾಲಯ, ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಗದಗ.

***Abstract:***
*ಕೃಷಿ ಕ್ಷೇತ್ರದಲ್ಲಿ ಏಕದಳ ಧಾನ್ಯಗಳಿಗೆ ಮೊದಲ ಸ್ಥಾನವಿದ್ದು, ನಂತರದ ಸ್ಥಾನ ಎಣ್ಣೆ ಕಾಳುಗಳದ್ದು. ಪ್ರಪಂಚದ ನಾಲ್ಕು ಪ್ರಮುಖ ಎಣ್ಣೆಕಾಳು ಬೆಳೆಗಳಲ್ಲಿ ಸೂರ್ಯಕಾಂತಿಯೂ ಕೂಡ ಒಂದಾಗಿದೆ. ಇದಲ್ಲದೆ ಸೋಯ ಅವರೆ, ನೆಲೆಗಡಲೆ ಹಾಗೂ ಸಾಸಿವೆ ಕೂಡ ಎಣ್ಣೆ ಬೀಜಗಳಲ್ಲಿ ಪ್ರಮುಖವಾದವುಗಳಾಗಿವೆ. ಪ್ರಸ್ತುತ ಲೇಖನದಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ ಸೂರ್ಯಕಾಂತಿ ಎಣ್ಣೆ ಬೀಜ ಉತ್ಪಾದನೆಯ ಮೇಲೆ ಸಕ್ಕರೆ ಕಾರ್ಖಾನೆಗಳ ಪರಿಣಾಮವೇನು ಎಂಬುದನ್ನು ವಿಶ್ಲೇಷಿಸಲಾಗಿದೆ.*

**Keywords:** *ಕೃಷಿ ಉತ್ಪಾದನೆ, ಸೂರ್ಯಕಾಂತಿ ಬೀಜ, ಎಣ್ಣೆ ಉತ್ಪಾದನೆ, ಸಕ್ಕರೆ ಕಾರ್ಖಾನೆ.*

## ಪೀಠಿಕೆ

ಮೂಲತಃ ಉತ್ತರ ಅಮೇರಿಕಾದ ಬೆಳೆಯಾದ ಸೂರ್ಯಕಾಂತಿಯು ಬೇರೆ–ಬೇರೆ ದೇಶಗಳಿಗೆ ಹರಡಿದಂತೆ ಭಾರತವನ್ನೂ ಕೂಡ ತಲುಪಿದೆ. ಸ್ಪ್ಯಾನಿಷ್ ವಲಸೆಗಾರರು ಮೊದಲ ಬಾರಿಗೆ ಅಮೇರಿಕಾದಿಂದ ಸೂರ್ಯಕಾಂತಿ ಬೀಜವನ್ನು ಯುರೋಪಿಗೆ ತಂದರು ಎನ್ನುವುದಕ್ಕೆ ಆಧಾರಗಳಿವೆ. ತರುವಾಯ ಈ ಬೆಳೆ ಇಟಲಿ ಮತ್ತು ಫ್ರಾನ್ಸ್ ದೇಶಗಳಿಗೂ ತಲುಪಿತೆನ್ನಲಾಗಿದೆ. ಸುಮಾರು 18ನೇ ಶತಮಾನದ ಆದಿಯಲ್ಲಿ ಸೂರ್ಯಕಾಂತಿ ರಷ್ಯಾ ದೇಶವನ್ನು ಪ್ರವೇಶಿಸಿತು. ಆಗ ಅಲ್ಲಿನ ಕೃಷಿ ವಿಜ್ಞಾನಿಗಳು ಹೆಚ್ಚಿನ ಸಂಶೋಧನೆ ಮಾಡಿ ಅಧಿಕ ಇಳುವರಿ ಮತ್ತು ಅಧಿಕ ಎಣ್ಣೆ ಕೊಡುವ ತಳಿಗಳನ್ನು ಅಭಿವೃದ್ಧಿಪಡಿಸಿದರು. ಇದೇ ತರಹದ ಅಭಿವೃದ್ಧಿ ಕಾರ್ಯವನ್ನು ಇತರೆ ದೇಶಗಳಲ್ಲಿಯೂ ಕೈಗೊಳ್ಳಲಾಯಿತು.

ಸೂರ್ಯಕಾಂತಿ ಬೆಳೆಯನ್ನು ಭಾರತದಲ್ಲಿ 1969 ರಲ್ಲಿ ಪರಿಚಯಿಸಲಾಯಿತು. ಇದನ್ನು ಪ್ರಾರಂಭದಲ್ಲಿ ಅಲಂಕಾರಿಕ ಸಸ್ಯ ಎಂದು ಬಳಸಲಾಯಿತು. ತರುವಾಯ ಎಣ್ಣೆ ಬೀಜವಾಗಿ ಸೂರ್ಯಕಾಂತಿ ಬೆಳೆಯನ್ನು ಬಳಸಲಾಯಿತು. ನಮ್ಮ ದೇಶದಲ್ಲಿ ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ಬಿಹಾರ, ಓರಿಸ್ಸಾ ಮತ್ತು ತಮಿಳುನಾಡು ರಾಜ್ಯಗಳು ಸೂರ್ಯಕಾಂತಿ ಬೆಳೆಯುವ ಪ್ರಮುಖ ರಾಜ್ಯಗಳಾಗಿವೆ.

ಸರ್ವಋತು ಬೆಳೆಯಾದ ಸೂರ್ಯಕಾಂತಿಯು ಮುಖ್ಯವಾದ ಎಣ್ಣೆ ಕಾಳಿನ ಬೆಳೆಯಾಗಿದೆ. ಕಡಿಮೆ

***Please cite this article as:*** ವಿದ್ಯಾಧರ ವೀ. ಶೀಲವಂತ & ತಿಪ್ಪಣ್ಣ ನಿಂ.ಗೋಡಿ. (2023). ಬಾಗಲಕೋಟೆ ಜಿಲ್ಲೆಯಲ್ಲಿ ಸೂರ್ಯಕಾಂತಿ ಎಣ್ಣೆ ಬೀಜ ಉತ್ಪಾದನೆಯ ಮೇಲೆ ಸಕ್ಕರೆ ಕಾರ್ಖಾನೆಗಳ ಪರಿಣಾಮ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್,* 2(5), 125–129

ಅವಧಿಯ, ಕಡಿಮೆ ಖರ್ಚಿನ ಲಾಭದಾಯಕ ಬೆಳೆಯಾಗಿದೆ. ಸೂರ್ಯಕಾಂತಿ ಹವಾಗುಣದಲ್ಲಾಗುವ ಬದಲಾವಣೆಗೆ ಹೊಂದಿಕೊಂಡು ವರ್ಷದ ಎಲ್ಲಾ ಹಂಗಾಮಿನಲ್ಲಿಯೂ ಬೆಳಯುತ್ತದೆ. ಹಾಗೂ ಸಾಧಾರಣ ಫಲವತ್ತಾದ ಭೂಮಿಯಲ್ಲಿ ಉತ್ತಮ ಇಳುವರಿ ಕೊಡುತ್ತದೆ. ಸೂರ್ಯಕಾಂತಿ ಬೀಜದಿಂದ ಬಹಳ ಪುಷ್ಠಿದಾಯಕವಾದ ಉತ್ತಮ ದರ್ಜೆಯ ಎಣ್ಣೆ ಪಡೆಯಬಹುದಾಗಿದೆ. ಇದರ ಪರಿಶುದ್ಧವಾದ ಎಣ್ಣೆಯನ್ನು ಔಷಧಗಳ ತಯಾರಿಕೆ ಹಾಗೂ ಕೈಗಾರಿಕೆಗಳಲ್ಲಿಯೂ ಸಹ ಉಪಯೋಗಿಸಲಾಗುತ್ತದೆ.

ರಾಜ್ಯದಲ್ಲಿ ಶೇಂಗಾ ಹೊರತು ಪಡಿಸಿದರೆ ಅತಿಹೆಚ್ಚು ಪ್ರದೇಶದಲ್ಲಿ ಸೂರ್ಯಕಾಂತಿಯನ್ನು ಬೆಳೆಯಲಾಗುತ್ತದೆ. ಸೂರ್ಯಕಾಂತಿಯನ್ನು ಮಳೆಯಾಶ್ರಯ ಅಥವಾ ನೀರಾವರಿ ಪ್ರದೇಶದಲ್ಲಿಯೂ ಬೆಳೆಯಬಹುದಾಗಿದೆ.

ಸೂರ್ಯಕಾಂತಿಯನ್ನು ಪ್ರಮುಖವಾಗಿ ಉತ್ತರ ಕರ್ನಾಟಕದ ವಿಜಯಪುರ, ರಾಯಚೂರು, ಬಾಗಲಕೋಟೆ, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತದೆ. ದೇಶದ ಒಟ್ಟು ಸೂರ್ಯಕಾಂತಿ ಬೆಳೆಯ ಶೇ.60% ರಷ್ಟು ಕ್ಷೇತ್ರವು ಕರ್ನಾಟಕ ರಾಜ್ಯವೊಂದರಲ್ಲೇ ಇದೆ. ರಾಜ್ಯದಲ್ಲಿ ಸೂರ್ಯಕಾಂತಿಯನ್ನು ಸುಮಾರು 11.8 ಲಕ್ಷ ಹೆಕ್ಟೇರ್‌ಗಳಲ್ಲಿ ಬೆಳೆಯಲಾಗುತ್ತಿದ್ದು, 5.1 ಲಕ್ಷ ಟನ್ ಇಳುವರಿ ಪಡೆಯಲಾಗುತ್ತಿದೆ. ಆದರೆ ಪ್ರತಿ ಹೆಕ್ಟೇರ್ ಇಳುವರಿ ಕೇವಲ 410 ಕಿ. ಗ್ರಾಂ. ದಷ್ಟಿರುವುದರಿಂದ ಸುಧಾರಿತ ತಾಂತ್ರೀಕತೆಗಳನ್ನು ಅಳವಡಿಸಿಕೊಂಡು ಅಧಿಕ ಇಳುವರಿ ಪಡೆಯಲು ಸಾಕಷ್ಟು ಅವಕಾಶಗಳಿವೆ.

ಮೋಡ ಕವಿದ ವಾತಾವರಣ ಈ ಬೆಳಗೆ ಅಷ್ಟು ಹಿತಕರವಲ್ಲ. ಮೋಡ ಕವಿದಾಗ ಪರಾಗ ಸ್ಪರ್ಶಕ್ಕೆ ಬೇಕಾದ ದುಂಬಿಗಳು ಲಭ್ಯವಿಲ್ಲದಿರುವುದರಿಂದ ಇಳುವರಿ ಕುಗ್ಗುತ್ತದೆ. ಆದುದರಿಂದ ಮಲೆನಾಡು ಹಾಗೂ ಕರಾವಳಿ ಪ್ರದೇಶಗಳಲ್ಲಿ ಈ ಬೆಳೆ ಬೆಳೆಯುವುದು ಸೂಕ್ತವಲ್ಲ. ಸೂರ್ಯಕಾಂತಿ ಬೆಳೆಯನ್ನು ಕೆಂಪು, ಕಪ್ಪು ಹಾಗೂ ಗೋಡು ಮಣ್ಣುಗಳಲ್ಲಿ ಬೆಳೆಯಬಹುದು. ನೀರು ಬಸಿಯದೆ ಇರುವ, ಹೆಚ್ಚು ಲವಣ ಹಾಗೂ ಆಮ್ಲಯುಕ್ತ ಮಣ್ಣುಗಳಲ್ಲಿ ಸೂರ್ಯಕಾಂತಿ ಅಷ್ಟು ಹುಲುಸಾಗಿ ಬೆಳೆಯುವುದಿಲ್ಲ.

ನಮ್ಮ ರಾಜ್ಯದಲ್ಲಿ ವೈವಿಧ್ಯಮಯ ಹವಾಮಾನ ಪರಿಸ್ಥಿತಿಯಿರುವುದ್ದರಿಂದ ಎಣ್ಣೆ ಕಾಳು ಬೆಳೆಗಳಲ್ಲಿಯೇ ಅತ್ಯಂತ ಸುಲಭವಾಗಿ ಸೂರ್ಯಕಾಂತಿಯನ್ನು ಬೆಳೆಯಬಹುದಾಗಿದೆ. ಆದರೆ ಕಳೆದ ಐದಾರು ವರ್ಷಗಳಿಂದ ಎಣ್ಣೆಕಾಳು ಬೆಳೆಗಳ ಕ್ಷೇತ್ರ ಅದರಲ್ಲಿಯೂ ಸೂರ್ಯಕಾಂತಿ ಬೆಳೆಯುವ ಪ್ರದೇಶ ಕಡಿಮೆಯಾಗುತ್ತಿದೆ. ಸದ್ಯದ ಪರಿಸ್ಥಿತಿಯಲ್ಲಿ ಈ ಬೆಳೆಯನ್ನು ಬೆಳೆಯುವ ಕ್ಷೇತ್ರವನ್ನು ಹೆಚ್ಚಿಸುವುದು ಸಾಧ್ಯವಿಲ್ಲದಿದ್ದರೂ ವೈಜ್ಞಾನಿಕ–ತಾಂತ್ರಿಕತೆಗಳನ್ನು ಅಳವಡಿಸಿ ಉತ್ಪಾದನೆಯನ್ನು ಹೆಚ್ಚಿಸಲು ಅವಕಾಶಗಳಿವೆ. ರಾಜ್ಯದ ಒಣ ಪ್ರದೇಶದ ಜಿಲ್ಲೆಗಳಾದ ಕೊಪ್ಪಳ, ರಾಯಚೂರು, ಬಳ್ಳಾರಿ, ವಿಜಯಪುರ, ಬಾಗಲಕೋಟೆ, ಗದಗದಲ್ಲಿ ತಡವಾದ ಮುಂಗಾರು ಅಥವಾ ಮುಂಚಿತ ಹಿಂಗಾರು ಹಂಗಾಮು ಅಂದರೆ ಆಗಸ್ಟ್ 2ನೇ ಪಾಕ್ಷಿಕದಿಂದ ಸಪ್ಟೆಂಬರ್‌ವರೆಗೆ ಸೂರ್ಯಕಾಂತಿ ಬಿತ್ತನೆ ಮಾಡುವುದು ವಾಡಿಕೆ ಹಾಗೂ ಉತ್ತಮವಾದಂತಹ ಕ್ರಮವಾದರೂ ಇದರ ಉತ್ಪಾದಕತೆ ಕಡಿಮೆಯಾಗಲು ಹಲವಾರು ಕಾರಣಗಳಿವೆ. ಅವುಗಳಲ್ಲಿ ಸೂಕ್ತ ಸಮಯದಲ್ಲಿ ಬಿತ್ತನೆ ಮಾಡದಿರುವುದು, ನಿರ್ಧಿಷ್ಟ ಪ್ರಮಾಣದ ಸಸಿಗಳನ್ನು ಕಾಪಾಡದಿರುವುದು, ಉತ್ತಮ ಗುಣಮಟ್ಟದ ಸಮತೋಲನ ಪ್ರಮಾಣದ ರಾಸಾಯನಿಕಗೊಬ್ಬರಬಳಸದಿರಿವುದು, ಪ್ರಮಾಣೀಕೃತ ಬೀಜಗಳನ್ನು ಬಳಸದರಿವುದು, ಕೂರಿಗೆಯಿಂದ ಬಿತ್ತನೆ ಮಾಡಿದಾಗ ದಟ್ಟ ಬೆಳೆಯಲ್ಲಿ ಸಸಿಗಳನ್ನು ತೆಗೆಯದೇ ಇರುವುದು, ಸಕಾಲದಲ್ಲಿ ಬಾರದಿರುವ ಮಳೆ, ಮಳೆ ಆದರೂ ವೈಜ್ಞಾನಿಕ ಉತ್ಪಾದನಾ ತಾಂತ್ರಿಕತೆಗಳನ್ನು ಅಳವಡಿಸಿಕೊಳ್ಳದಿರುವುದು ಮತ್ತು ಸರಿಯಾದ ಸಮಯಕ್ಕೆ ಕೀಟ ಹಾಗೂ ರೋಗಗಳ ನಿಯಂತ್ರಣ

ಮಾಡದಿರುವದು ಇತ್ಯಾದಿ. ಜೊತೆಗೆ ಸೂರ್ಯಕಾಂತಿ ನಂತರ ಸೂರ್ಯಕಾಂತಿಯನ್ನೇ ಬೆಳೆಯುವುದರಿಂದ ಸಹ ಇಳುವರಿ ಕಡಿಮೆಯಾಗುವುದು. ಇವುಗಳಿಂದಾಗಿ ಬೆಳೆಯ ಒಟ್ಟಾರೆ ಉತ್ಪಾದನೆ ಇಳಿಮುಖವಾಗಿದೆ.

ಸೂರ್ಯಕಾಂತಿ ಬೆಳೆಯು ಬಾಗಲಕೋಟೆ ಜಿಲ್ಲೆಯಲ್ಲಿ ಎರಡು ದೊಡ್ಡ ಪ್ರಮಾಣದ ಹೊಡೆತಕ್ಕೊಳಗಾಗಿ ನರಳಿದ್ದನ್ನು ಇಪ್ಪತ್ತು ವರ್ಷಗಳ ಇತಿಹಾಸದ ಪುಟಗಳಲ್ಲಿ ಕಾಣಬಹುದಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆ ಎಂಬ ಮಹಾ ತಿಮಿಂಗಿಲವು ಜಿಲ್ಲೆಯ ಮೂರು ನದಿಗಳ ಎಡ, ಬಲದ ಫಲವತ್ತಾದ ಭೂಮಿಯನ್ನು ನುಂಗಿ ನೀರು ಕುಡಿದದ್ದು ಮೊದಲ ಹೊಡೆತವಾದರೆ, ಜಿಲ್ಲೆಯಲ್ಲಿ ಪ್ರಾರಂಭಗೊಂಡ ಸಕ್ಕರೆ ಕಾರ್ಖಾನೆಗಳಿಂದಾಗಿ ಸೂರ್ಯಕಾಂತಿ ಬೆಳೆಯನ್ನು ಬೆಳೆಯುತ್ತಿದ್ದ ಪ್ರದೇಶವೆಲ್ಲ ಕಬ್ಬಿನಿಂದ ತುಂಬಿಕೊಂಡಿದ್ದು ಎರಡನೆಯ ಹೊಡೆತವಾಗಿದೆ. ಹೀಗೆ ಎರಡು ಹೊಡೆತಕ್ಕೆ ಸಿಕ್ಕ ಸೂರ್ಯಕಾಂತಿ ಬೆಳೆಯ ಉತ್ಪಾದನೆ ಅತ್ಯಂತ ಕ್ಷೀಣಿಸಿದೆ.

ಪ್ರಸ್ತುತ ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಜಿಲ್ಲೆಯ ಒಟ್ಟು 176 ಗ್ರಾಮಗಳು ಮುಳುಗಡೆಯಾಗಿದೆ. ಅದರೊಂದಿಗೆ ಕೃಷ್ಣಾ, ಘಟಪ್ರಭಾ ಮತ್ತು ಮಲಪ್ರಭಾ ನದಿಯುದ್ದಕ್ಕೂ ಚಾಚಿಕೊಂಡಿದ್ದ ಫಲವತ್ತಾದ ಭೂಮಿಗಳು ಸಹ ಮುಳುಗಡೆಯಾಗಿರುವುದು ಬಾಗಲಕೋಟೆ ಜಿಲ್ಲೆಯ ಆರ್ಥಿಕತೆಗೆ ತುಂಬಲಾರದ ನಷ್ಟವನ್ನುಂಟು ಮಾಡಿರುವ ಸಂದರ್ಭದಲ್ಲಿಯೇ, ಈ ಜಿಲ್ಲೆಯಲ್ಲಿ ಪ್ರಾರಂಭವಾದ 12 ಸಕ್ಕರೆ ಕಾರ್ಖಾನೆಗಳು ಎಣ್ಣೆ ಬೀಜಗಳ ಬೆಳೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿವೆ.

ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳು ಪ್ರಾರಂಭವಾದ ನಂತರ ಕೃಷಿಕರು ಹೆಚ್ಚು ಲಾಭ ನೀಡುವ ಮತ್ತು ಕಡಿಮೆ ಶ್ರಮ ಬೇಡುವ ವಾಣಿಜ್ಯ ಬೆಳೆಯಾದ ಕಬ್ಬನ್ನು ಬೆಳೆಯಲು ಹೆಚ್ಚು ಆಸಕ್ತಿ ವಹಿಸುತ್ತಿದ್ದಾರೆ. ಬಾಗಲಕೋಟೆ ಜಿಲ್ಲೆಯಲ್ಲಿರುವ ಒಟ್ಟು 12 ಸಕ್ಕರೆ ಕಾರ್ಖಾನೆಗಳು ಎಲ್ಲ ವಿಧದ ಎಣ್ಣೆ ಬೀಜಗಳ ಬೆಳೆಯ ಮೇಲೆ ಮಾತ್ರವಲ್ಲದೇ ಸೂರ್ಯಕಾಂತಿ ಬೆಳೆಯ ಮೇಲೆ ಬೀರಿರುವ ಪ್ರಭಾವವನ್ನು ಕೋಷ್ಟಕ 1 ರಿಂದ ತಿಳಿದುಕೊಳ್ಳಬಹುದಾಗಿದೆ.

ಕೋಷ್ಟಕ 1 ನ್ನು ಗಮನಿಸಿದಾಗ 2002–03 ರಿಂದ 2008–09 ರ ಅವಧಿಯಲ್ಲಿ ಎಲ್ಲ ವಿಧದ ಎಣ್ಣೆ ಬೀಜಗಳ ಬೆಳೆಗಾಗಿ ಸರಾಸರಿ 1,30,000 ನಷ್ಟು ಹೆಕ್ಟೇರ್ ಭೂಮಿ ಬಳಕೆಯಾಗುತ್ತಿತ್ತು. ಕ್ರಮೇಣವಾಗಿ ಇಳಿಜಾರಿನತ್ತ ಸಾಗಿದ ಎಣ್ಣೆ ಬೀಜಗಳಿಗೆ ಬಳಕೆಯಾಗುವ ಕೃಷಿ ಭೂಮಿ ಇತ್ತೀಚಿನ ಕೆಲ ವರ್ಷಗಳಲ್ಲಿ ತೀರಾ ಕೆಳಮಟ್ಟಕ್ಕೆ ಬಂದು ನಿಂತಿದೆ. ಕಳೆದ 5 ವರ್ಷಗಳಲ್ಲಿ ಅಂದರೆ 2017–18 ರಿಂದ 2021–22 ರಲ್ಲಿ ಎಲ್ಲ ವಿಧದ ಎಣ್ಣೆ ಬೀಜಗಳ ಬೆಳೆಗಾಗಿ ಬಳಕೆಯಾಗುವ ಕೃಷಿ ಭೂಮಿ ಕೇವಲ 55,000 ದಿಂದ 60,000 ಹೆಕ್ಟೇರ್ ಪ್ರದೇಶ ಮಾತ್ರ. ಇದರೊಂದಿಗೆ ಸರಾಸರಿ ಉತ್ಪಾದನೆಯ ಪ್ರಮಾಣ ಕೂಡಾ ತುಂಬಾ ಕಡಿಮೆಯಾಗಿದೆ. ಇದು ದೇಶದಲ್ಲಿ ಖಾದ್ಯ ತೈಲಗಳಿಗಿರುವ ಬೇಡಿಕೆಯನ್ನು ಪೂರೈಸಲು ಆಮದಿನ ಮೇಲೆ ಅವಲಂಬನೆ ಹೆಚ್ಚಲು ಕಾರಣವಾಗಿದೆ. ಆದರೆ ಭೂ ಬಳಕೆ ಕಡಿಮೆ ಇದ್ದರೂ ಕೂಡಾ ಕೃಷಿಯಲ್ಲಿ ನಿರಂತರ ತಾಂತ್ರಿಕತೆಯನ್ನು ಬಳಸುತ್ತಿರುವುದು, ಸುಧಾರಿತ ಕೃಷಿ ಪದ್ಧತಿಗಳನ್ನು ಬಳಸುತ್ತಿರುವುದು, ಸುಧಾರಿತ ಹೊಸ–ಹೊಸ ತಳಿಗಳು, ಕೃಷಿಯಲ್ಲಿ ನಿರಂತರವಾಗಿ ಕೈಗೊಂಡಿರುವ ಸಂಶೋಧನೆಗಳು, ಸರಕಾರದಿಂದ ಎಣ್ಣೆ ಬೀಜಗಳ ಉತ್ಪಾದನೆ ಹೆಚ್ಚಿಸಲು ಕೈಗೆತ್ತಿಕೊಂಡಿರುವ ಯೋಜನೆಗಳ ಫಲವಾಗಿ ಮೊದಲಿನ 5 ವರ್ಷಗಳಲ್ಲಿ ಸರಾಸರಿ ಪ್ರತಿ ಹೆಕ್ಟೇರ್‌ಗೆ 600 ಕೆ.ಜಿ.ಯಷ್ಟಿದ್ದ ಇಳುವರಿಯ ಪ್ರಮಾಣ ಇತ್ತೀಚಿನ 5 ವರ್ಷಗಳಲ್ಲಿ ಸರಾಸರಿ ಪ್ರತಿ ಹೆಕ್ಟೇರ್‌ಗೆ 1,150 ಕೆ.ಜಿ. ತಲುಪಿರುವುದು ಸಮಾಧಾನಕರ ಸಂಗತಿಯಾಗಿದೆ.

ಸೂರ್ಯಕಾಂತಿ ಬೆಳೆಯು ಸಕ್ಕರೆ ಕಾರ್ಖಾನೆಗಳ ಪ್ರಭಾವಕ್ಕೆ ಸಿಲುಕಿ ನಲುಗುತ್ತಿರುವುದಕ್ಕೆ ಹೊರತಾಗಿಲ್ಲ.

2002–03 ರಿಂದ 2006–07 ರಲ್ಲಿ 1,09,000 ಹೆಕ್ಟೇರ್‌ನಷ್ಟು ಕೃಷಿ ಭೂಮಿ ಸೂರ್ಯಕಾಂತಿ ಎಣ್ಣೆ

**ಕೋಷ್ಟಕ 1: ಬಾಗಲಕೋಟೆ ಜಿಲ್ಲೆಯಲ್ಲಿ ಕಳೆದ 20 ವರ್ಷಗಳಲ್ಲಿ (2002–03 ರಿಂದ 2021–22 ರವರೆಗೆ) ಸೂರ್ಯಕಾಂತಿ ಮತ್ತು ಎಲ್ಲಾ ಎಣ್ಣೆ ಬೀಜಗಳ ಬೆಳೆಗಾಗಿ ಬಳಕೆಯಾಗಿರುವ ಕೃಷಿ ಭೂಮಿ, ಒಟ್ಟು ಉತ್ಪಾದನೆ ಮತ್ತು ಇಳುವರಿ.**

| ವರ್ಷ | ಸೂರ್ಯಕಾಂತಿ ಎಣ್ಣೆ ಬೀಜ | | | ಇತರೆ ಎಣ್ಣೆ ಕಾಳು ಬೆಳೆಗಳು/ಬೀಜಗಳು | | |
|---|---|---|---|---|---|---|
| | ಬಿತ್ತನೆ ಮಾಡಿದ ಪ್ರದೇಶ (ಹೆಕ್ಟೇರ್) | ಉತ್ಪಾದನೆ (ಟನ್) | ಇಳುವರಿ (ಟನ್/ಹೆ) | ಬಿತ್ತನೆ ಮಾಡಿದ ಪ್ರದೇಶ (ಹೆಕ್ಟೇರ್) | ಉತ್ಪಾದನೆ (ಟನ್) | ಇಳುವರಿ (ಟನ್/ಹೆ) |
| 2002–03 | 81,081 | 45,300 | 558.7 | 1,08,799 | 66,705 | 613.10 |
| 2003–04 | 1,02,970 | 36,168 | 351.2 | 1,27,959 | 61,702 | 482.20 |
| 2004–05 | 1,18,111 | 67,809 | 574.1 | 1,60,212 | 1,04,295 | 650.98 |
| 2005–06 | 1,33,718 | 85,663 | 640.6 | 1,76,542 | 1,17,420 | 665.11 |
| 2006–07 | 1,11,488 | 35,791 | 321.0 | 1,46,625 | 56,248 | 383.62 |
| 2007–08 | 88,730 | 55,785 | 628.7 | 1,22,139 | 82,936 | 679.03 |
| 2008–09 | 88,433 | 46,310 | 523.7 | 1,17,623 | 70,377 | 598.33 |
| 2009–10 | 60,584 | 24,551 | 405.2 | 95,522 | 51,927 | 543.61 |
| 2010–11 | 35,440 | 25,503 | 719.6 | 68,193 | 60,655 | 889.46 |
| 2011–12 | 50,362 | 26,007 | 516.4 | 86,646 | 59,950 | 691.90 |
| 2012–13 | 41,093 | 22,378 | 544.6 | 72,826 | 52,246 | 717.41 |
| 2013–14 | 48,650 | 27,564 | 566.6 | 83,530 | 60,289 | 721.76 |
| 2014–15 | 41,409 | 26,689 | 644.5 | 73,856 | 57,760 | 782.06 |
| 2015–16 | 29,231 | 14,883 | 509.2 | 61,478 | 41,428 | 673.87 |
| 2016–17 | 34,832 | 15,674 | 450.0 | 67,882 | 54,357 | 800.76 |
| 2017–18 | 34,009 | 35,801 | 1052.7 | 65,980 | 80,298 | 1217.01 |
| 2018–19 | 39,917 | 37,423 | 937.5 | 72,509 | 69,095 | 952.92 |
| 2019–20 | 20,233 | 16,448 | 812.9 | 46,310 | 54,393 | 1174.54 |
| 2020–21 | 20,270 | 19,894 | 981.5 | 69,610 | 86,736 | 1246.03 |
| 2021–22 | 16,530 | 15,169 | 917.7 | 53,621 | 67,204 | 1253.31 |

ಮೂಲ: Directorate of Economics and Statistics, Department of Agriculture, Cooperation and Farmers Welfare, Ministry of Agriculture and Farmers Welfare, GOI. https://data.desagri.gov.in/website/crops-apy-report-web)

ಬೀಜಗಳನ್ನು ಬೆಳೆಯಲು ಬಳಕೆಯಾಗುತ್ತಿತ್ತು. ಸೂರ್ಯಕಾಂತಿ ಬೆಳೆಯು ಸಕ್ಕರೆ ಕಾರ್ಖಾನೆಗಳ ಪ್ರಭಾವಕ್ಕೆ ಸಿಲುಕಿ ನಲುಗುತ್ತಿರುವುದಕ್ಕೆ ಹೊರತಾಗಿಲ್ಲ. 2002–03 ರಿಂದ 2006–07 ರಲ್ಲಿ 1,09,000 ಹೆಕ್ಟೇರ್‌ನಷ್ಟು ಕೃಷಿ ಭೂಮಿ ಸೂರ್ಯಕಾಂತಿ ಎಣ್ಣೆ ಬೀಜಗಳನ್ನು ಬೆಳೆಯಲು ಬಳಕೆಯಾಗುತ್ತಿತ್ತು. ಅದರೊಂದಿಗೆ ವಾರ್ಷಿಕ ಸರಾಸರಿ 54,000 ಟನ್ ಸೂರ್ಯಕಾಂತಿಎಣ್ಣೆಬೀಜಗಳನ್ನು ಬೆಳೆಯಲಾಗುತ್ತಿತ್ತು.

ಮುಂಚಿನ 5 ವರ್ಷಗಳ ಅವಧಿಗೆ ಹೋಲಿಸಿದಾಗ ಇತ್ತೀಚಿನ, ಅಂದರೆ ಕೊನೆಯ ಐದು ವರ್ಷಗಳಲ್ಲಿ ಸೂರ್ಯಕಾಂತಿ ಎಣ್ಣೆ ಬೀಜಗಳ ಬೆಳೆಗಾಗಿ ಬಳಕೆಯಾಗುತ್ತಿರುವ ಭೂಮಿಯಲ್ಲಿ 55% ರಷ್ಟು ಕಡಿಮೆಯಾಗಿದೆ. ಅದರಲ್ಲೂ 2021–22 ರಲ್ಲಿ ಕೇವಲ 16,530 ಹೆಕ್ಟೇರ್ ಭೂ ಬಳಕೆಯೊಂದಿಗೆ 15,169 ಟನ್ ಮಾತ್ರ ಬೆಳೆಯಲಾಗಿದೆ. ಆದರೆ ಸೂರ್ಯಕಾಂತಿಯ ಇಳುವರಿ ಮೊದಲಿನ 5 ವರ್ಷಗಳಲ್ಲಿ ಪ್ರತಿ ಹೆಕ್ಟೇರ್‌ಗೆ 500 ಕಿ.ಗ್ರಾಂ. ನಷ್ಟಿದ್ದದ್ದು ಈಗ ಪ್ರತಿ ಹೆಕ್ಟೇರ್‌ಗೆ ಸರಾಸರಿ 900 ಕಿ.ಗ್ರಾಂ.ಗೆ ತಲುಪಿದೆ. ಆದರೆ ಗಮನಿಸಬೇಕಾದ ಸಂಗತಿ ಎಂದರೆ ಕೃಷಿ ಭೂ–ಬಳಕೆಯಲ್ಲಿ ಮತ್ತು ಬೆಳೆಯಲ್ಲಿ ಅಷ್ಟು ದೊಡ್ಡ ಪ್ರಮಾಣದ ಇಳಿಕೆಯಾದಾಗ ಅತ್ಯಲ್ಪ ಪ್ರಮಾಣದಲ್ಲಿ ಇಳುವರಿಯನ್ನು ಹೆಚ್ಚಿಸುವುದರೊಂದಿಗೆ ದೇಶದಲ್ಲಿ ಹೆಚ್ಚುತ್ತಿರುವ ಖಾದ್ಯ ತೈಲಗಳಿಗಿರುವ ಬೇಡಿಕೆಯನ್ನು ಸಂಪೂರ್ಣವಾಗಿ ತಲುಪಲು ಸಾಧ್ಯವಾಗದು. ಇದು ಆಮದು ಹೆಚ್ಚಿಸುವುದರೊಂದಿಗೆ ವಿದೇಶಗಳೊಂದಿಗೆ ಇರುವ ಸಂದಾಯ ಬಾಕಿಯನ್ನು ಹೆಚ್ಚಿಸಲು (ಋಣಾತ್ಮಕವಾಗಿ) ಕಾರಣವಾಗುತ್ತದೆ.

ಬಾಗಲಕೋಟ ಜಿಲ್ಲೆಯಲ್ಲಿ ಸೂರ್ಯಕಾಂತಿ ಬೆಳೆಗೆ ಗಿ ಬಳಕೆಯಾಗುತ್ತಿರುವ ಭೂಮಿ ಮತ್ತು ಸೂರ್ಯಕಾಂತಿ ಬೆಳೆಯ ಪ್ರಮಾಣದಲ್ಲಿ ಸತತವಾಗಿ ಇಳಿಮುಖವಾಗುತ್ತಿರುವುದಕ್ಕೆ ಕೇವಲ ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆಗಳು ಮಾತ್ರವಲ್ಲದೇ ಇನ್ನು ಅನೇಕ ಕಾರಣಗಳಿರಬಹುದು. ಇದು ಸೂರ್ಯಕಾಂತಿ ಎಣ್ಣೆ ಬೀಜಗಳಲ್ಲಿನ ಕಡಿಮೆ ಇಳುವರಿಯ ಪರಿಣಾಮವಿರಬಹುದು, ಬಿತ್ತನೆಗೆ ಬೇಕಾಗಿರುವ ಎಣ್ಣೆ ಬೀಜಗಳ ಕೊರತೆ ಇರಬಹುದು, ಕೃಷಿ ಕಾರ್ಮಿಕರ ಕೊರತೆ ಇರಬಹುದು, ಕೃಷಿಗೆ ಬೇಕಾದ ಹಣಕಾಸಿನ ತೊಂದರೆ, ಕಡಿಮೆ ಲಾಭದ ಪರಿಣಾಮ, ಸೂರ್ಯಕಾಂತಿ ಬೆಳೆಯಲ್ಲಿರುವ ಅನಿಶ್ಚಿತತೆ, ಸೂರ್ಯಕಾಂತಿ ಬೆಳೆಗೆ ತಗುಲುತ್ತಿರುವ ಬಗೆ–ಬಗೆಯ ರೋಗಗಳು, ಪೋಷಕಾಂಶಗಳ ಕೊರತೆ, ದಲ್ಲಾಳಿಗಳ ವರ್ತನೆ, ಮಾರುಕಟ್ಟೆಯ ಕೊರತೆ, ಮಾರುಕಟ್ಟೆಗೆ ಸಂಬಂಧಪಟ್ಟ ಮಾಹಿತಿಯ ಕೊರತೆ, ಸರಕಾರದ ನಿರಾಸಕ್ತಿ, ಸರಕಾರದಿಂದ ಲಭ್ಯವಿರುವ ಸಹಾಯಧನದ ಕೊರತೆ ಹೀಗೆ ಹತ್ತು ಹಲವಾರು ಕಾರಣಗಳಿರುವುದನ್ನು ಸಂಶೋಧನೆಯ ಸಂದರ್ಭದಲ್ಲಿ ಗುರುತಿಸಲಾಗಿದೆ.

**ಪರಾಮರ್ಶನ ಗ್ರಂಥಗಳು**


- ಶಾಂತವೀರಭದ್ರಯ್ಯ ಎಸ್. ಎಮ್. (2014). *ಎಣ್ಣೆ ಕಾಳು ಬೆಳೆಗಳು.* ಕೃಷಿ ವಿಜ್ಞಾನ ವಾಹಿನಿ.
- Curvetto, N., Figlas, D., & Delmastro, S. (2002). Sunflower seed hulls as substrate for the cultivation of shiitake mushrooms. *Horttechnology*, *12*(4), 652–655.
- Deshpande, R. S. (2002). *Evaluation of Oilseed Production Programme in Karnataka*, Institute for Social and economic Change.
- Gururaja B R. (2022, June 23). North Karnataka farmers switch to sunflower. Deccan Herald.
- Komol Singha, Parmod Kumar & Kedar Vishnu. (2014). *Problems and Prospects of Sunflower Production in Karnataka.* Institute for Social and Economic Change.
- Mahesh, R. (1999). *Causes and Consequences of Change in Cropping Pattern: A Location-specific Study*. Kerala Research Programme on Local Level Development, Centre for Development Studies.
- Rai, Mangala (1999). *Oilseed in India: A Success Story.* APAARI Publications
- Yogeshwari, S (2013). Cropping Towards Commercialization: Are We Neglecting Food Security: A Case Study of Karnataka State. *Asian Journal of Research in Business Economics and Management*, 3(4), 38-52.